ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು

ಸ್ಪೆಷಲ್ ಕೇಸ್ ನಂಬ್ರ 184/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಂ. ಜಗದೀಶ್ | ಫ್ರಾಸಾಃ 7 |
| ತಂದೆಯ ಹೆಸರು | : | ಮಹಾಬಲೇಶ್ವರ ನಾಯಕ್ | ಚಾಸಾಃ 15 |
| ಪ್ರಾಯ | : | 55 ವರ್ಷ | ದಿನಾಂಕಃ 06.11.2024. ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | Addl. S.P., ಕಾರವಾರ | |
| ವಾಸಸ್ಥಳ | : | ಕಾರವಾರ | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು ಡಿಸೆಂಬರ್ 2019 ರಿಂದ ಜನವರಿ 2021 ರವರೆಗೆ ಮಂಗಳೂರುನಲ್ಲಿ ಎಸಿಪಿಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2) 07.09.2020ರಂದು ಮಧ್ಯಾಹ್ನ 2.45 ಗಂಟೆಗೆ ಪೂರ್ವ ಠಾಣೆಯ ಇನ್ಸೆಕ್ಟರ್ ಸವಿತ್ರ ತೇಜ್ ಇವರು ದೂರವಾಣಿಯಲ್ಲಿ ಮಾಹಿತಿ ನೀಡಿ ಆರೋಪಿಯಾದ ಮೊಹಮ್ಮದ್ ಅಫ್ರೀದ್ ಇವನು ಗಾಂಜಾ ಸಾಗಾಟ ಮಾಡುತ್ತಿದ್ದಾನೆ, ಅವನ ದಸ್ತಗಿರಿ ಕ್ರಮ ಜರುಗಿಸಿ ಅಂಗಶೋಧನೆ ಮಾಡಲು ಪತ್ರಾಂಕಿತ ಅಧಿಕಾರಿಯಾಗಿ ಬರಬೇಕೆಂದು ಕೋರಿಕೊಂಡಿದ್ದು ನಾನು 3.00 ಗಂಟೆಗೆ ಪೂರ್ವ ಠಾಣೆಗೆ ಹೋಗಿರುತ್ತೇನೆ. ಅಲ್ಲಿ ಇನ್ಸೆಕ್ಟರ್, ಪಂಚರು ಹಾಗೂ ಸಿಬ್ಬಂದಿಗಳು ಹಾಜರಿದ್ದರು. ಇನ್ಸೆಕ್ಟರ್ ದಾಳಿ ಮಾಡುವ

ಬಗ್ಗೆ ಮಾಹಿತಿ ನೀಡಿ ಪತ್ರಾಂಕಿತ ಅಧಿಕಾರಿಯಾಗಿ ಬರಲು ಮನವಿ ಪತ್ರ ನೀಡಿರುತ್ತಾರೆ. ಅದರಲ್ಲಿ ನನ್ನ ಸಹಿ ಇದೆ. ಪಂಚರ ಸಮಕ್ಷಮ ಸಿಬ್ಬಂದಿಗಳ ಅಂಗಶೋಧನೆ ಮಾಡಿ ಮಹಜರ್ ತಯಾರಿಸಲಾಗಿದೆ. ಇದನ್ನು 3.15ರಿಂದ 3.20ರವರೆಗೆ ತಯಾರಿಸಲಾಗಿದೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಈಗ ನೋಡಿದ ಮಹಜರ್ ನಲ್ಲಿರುವ (ನಿಪಿ-10) ಸಹಿ ನನ್ನದು ಇದೆ. ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು.

3) 03.30 ಗಂಟೆಗೆ ಪಂಚರು ಮತ್ತು ಸಿಬ್ಬಂದಿಗಳೊಂದಿಗೆ ಸಲಕರಣೆ, ತೂಕ ಯಂತ್ರದೊಂದಿಗೆ ಮಾಹಿತಿ ಸ್ಥಳವಾಗ ಶಿವಭಾಗ್ ಕದ್ರಿಗೆ ಹೋಗಿರುತ್ತೇವೆ. ಅಲ್ಲಿ ಮರೆಯಲ್ಲಿ ನಿಂತು ವಾಚ್ ಮಾಡುತ್ತಿದ್ದಾಗ 4.05 ಗಂಟೆಗೆ ಕಪ್ಪು ಬಣ್ಣದ ಸ್ಕೂಟರ್ ನಲ್ಲಿ ಒಬ್ಬ ವ್ಯಕ್ತಿ ಬರುತ್ತಿದ್ದು ನಿಲ್ಲಿಸಲು ಸಂಜ್ಞೆ ಮಾಡಿದಾಗ ನಿಲ್ಲಿಸದೇ ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟು ಮುಂದೆ ಹೋಗಿ ನಿಯಂತ್ರಣ ತಪ್ಪಿ ಬಿದ್ದಿರುತ್ತಾನೆ. ಅಲ್ಲಿಂದ ಎದ್ದು ಸ್ಕೂಟರ್ ನ ಕಾಲಬುಡದಲ್ಲಿದ್ದ ಚೀಲವನ್ನು ಎತ್ತಿಕೊಂಡು ಓಡಿ ಹೋಗಲು ಪ್ರಯತ್ನಿಸಿದಾಗ ಸಿಬ್ಬಂದಿಗಳು ಅವನನ್ನು ಹಿಡಿದಿರುತ್ತಾರೆ. ಅವನನ್ನು ವಿಚಾರಿಸಿದಾಗ ಆತನ ಹೆಸರು ಮೊಹಮ್ಮದ್ ಅಫ್ರೀದ್ ಎಂದು ತಿಳಿಸಿರುತ್ತಾನೆ. ಚೀಲದಲ್ಲಿದ್ದ ವಸ್ತುವಿನ ಬಗ್ಗೆ ವಿಚಾರಿಸಿದಾಗ ಅದನ್ನು ಹೇಳಲು ತಡವರಿಸಿದ್ದು ನಂತರ ಕೂಲಂಕುಷವಾಗಿ ವಿಚಾರಿಸಿದಾಗ ಅದು ಗಾಂಜಾ ಎಂದು ತಿಳಿಸಿರುತ್ತಾನೆ. ಅದನ್ನು ತೊಕ್ಕೊಟ್ಟುನಲ್ಲಿರುವ ಶರೀಫ್ ಅನ್ನುವವರಿಂದ ತಂದು ಮಾರಾಟ ಮಾಡುತ್ತಿದ್ದೇನೆ ಎಂದು ತಿಳಿಸಿರುತ್ತಾನೆ.

4) ಪತ್ರಾಂಕಿತ ಅಧಿಕಾರಿಯಿಂದ ಅಂಗಶೋಧನೆ ನಡೆಸಲು ನೋಟೀಸ್ ಕೊಟ್ಟಿರುತ್ತೇನೆ. ಅದಕ್ಕೆ ಆತ ಒಪ್ಪಿ ಸಹಿ ಮಾಡಿರುತ್ತಾನೆ. ನಾನು ಪತ್ರಾಂಕಿತ ಅಧಿಕಾರಿ ಎಂದು ಗುರುತಿನ ಪತ್ರ ತೋರಿಸಿದ ಮನದಟ್ಟು ಮಾಡಿರುತ್ತೇನೆ. ನಂತರ ಆತನ ಚೀಲವನ್ನು ಪರಿಶೀಲಿಸಿದಾಗ ಪಾಲಿಥೀನ್ ಚೀಲದಲ್ಲಿ ಪ್ಲಾಸ್ಟಿಕ್ ತೊಟ್ಟೆ ಇದ್ದು ಅದರಲ್ಲಿ ಗಾಂಜಾ ಇರುವುದು ಕಂಡು ಬಂದಿತ್ತು. ಅದನ್ನು ತೂಕ ಮಾಡಿದಾಗ 2.200 ಕೆಜಿ ಇರುವುದು ಕಂಡು ಬಂದಿತ್ತು. ಅದನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ E ಅಕ್ಷರದಿಂದ ಸೀಲ್ ಮಾಡಿ ಪಂಚರ ಹಾಗೂ ನನ್ನ ಸಹಿ ಇರುವ ಚೀಟಿ ಅಂಟಿಸಲಾಗಿದೆ. ನಂತರ ಆತನ ಅಂಗಜಪ್ತಿ ಮಾಡಿದಾಗ ವಿವೊ ಮೊಬೈಲ್ ಸಿಕ್ಕಿರುತ್ತದೆ. ಅದನ್ನು ವಶಪಡಿಸಿಕೊಂಡಿರುತ್ತೇವೆ. ಗಾಂಜಾ ಸಾಗಾಟ ಮಾಡಲು ಬಳಸಿದ ಸ್ಕೂಟರನ್ನು ವಶಪಡಿಸಿಕೊಂಡಿರುತ್ತೇವೆ. ಈ ಬಗ್ಗೆ ವಿವರವಾದ ಮಹಜರನ್ನು ತಯಾರಿಸಿದ್ದು ಅದನ್ನು 4.15ರಿಂದ 6.15ರವರೆಗೆ ಮಾಡಿರುತ್ತೇವೆ. ಅದಕ್ಕೆ ಸಹಿ ಮಾಡಿರುತ್ತೇವೆ. ಈಗ ನೋಡಿದ ಮಹಜರಿನಲ್ಲಿರುವ (ನಿಪಿ-2) ಸಹಿ ನನ್ನದು ಇದೆ. ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.ಈಗ ನೋಡಿದ ವಸ್ತುವನ್ನು (ಮುಮಾ-1, ಮುಮಾ-2) ಅಲ್ಲಿ ನಾನು ನೋಡಿದ್ದು ಇದೆ. ಈಗ ನೋಡಿದ ಫೋಟೋದಲ್ಲಿ (ನಿಪಿ-3) ಕಾಣುವ ವಾಹನವನ್ನು ನಾನು ಅಲ್ಲಿ ನೋಡಿದ್ದೇನೆ. ನ್ಯಾಯಾಲಯದಲ್ಲಿರುವ ಆರೋಪಿಯನ್ನು ಅಲ್ಲಿ ವಶಕ್ಕೆ ಪಡೆದುಕೊಂಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಐ.ಎಸ್., ವಕೀಲರಿಂದಃ

5) ನನ್ನ ಅಂಗಶೋಧನೆಯನ್ನು ಇನ್ಸ್ಪೆಕ್ಟರ್ ಮಾಡಿರುತ್ತಾರೆ. ಈ ಕುರಿತು ಮಹಜರ್ ತಯಾರಿಸಿರುತ್ತಾರೆ. ನಿಪಿ-10ರ ಮಹಜರನ್ನು ಅಲ್ಲಿ ಮಾಡಲಾಗಿದೆ. ನಾನು ಪೂರ್ವ ಪೊಲೀಸ್ ಠಾಣೆಗೆ ಬರುವುದಕ್ಕಿಂತ ಮೊದಲು ಲಿಖಿತವಾಗಿ ಪತ್ರವನ್ನು ಇನ್ಸ್ಪೆಕ್ಟರ್ ನನಗೆ ಕೊಟ್ಟಿರುವುದಿಲ್ಲ. ಫೋನ್ ಮುಖಾಂತರ ತಿಳಿಸಿದ್ದು ಇದೆ. ನನಗೆ ನೀಡಿದ್ದ ಮಾಹಿತಿಯಂತೆ ತಕ್ಷೀರು ಸ್ಥಳ ಕದ್ರಿ ಶಿವಭಾಗ್ ಇರುತ್ತದೆ. ಇನ್ಸ್ಪೆಕ್ಟರ್ ಹಾಗೂ ಇತರರೊಂದಿಗೆ ಎರಡು ವಾಹನಗಳಲ್ಲಿ ಹೋಗಿರುತ್ತೇವೆ. ನಾವು ಹೋಗಿದ್ದು ಶಿವಭಾಗ್ 5ನೇ ಕ್ರಾಸ್‌ಗೆ. ಆರೋಪಿಯನ್ನು ಮಹಜರ್ ಆದ ನಂತರ ದಸ್ತಗಿರಿ ಮಾಡಲಾಗಿದೆ. ತಕ್ಷೀರು ಸ್ಥಳದಲ್ಲಿ ಸಾಯಂಕಾಲ 06.15ರವರೆಗೆ ಇದ್ದೆವು. ಮೊಬೈಲ್‌ಗೆ ಪೌಚ್ ಹಾಕಿದ್ದ ಬಗ್ಗೆ ನನಗೆ ನೆನಪಿಲ್ಲ. ಆ ಮೊಬೈಲ್ ಯಾವ ಮೋಡೆಲ್ ಎಂದು ಗೊತ್ತಿಲ್ಲ.

6) ನಾನು ತಕ್ಷೀರು ಸ್ಥಳಕ್ಕೆ ಹೋಗಿಲ್ಲ, ಅಲ್ಲಿ ಆರೋಪಿಯ ಹತ್ತಿರ ಇದ್ದ ವಸ್ತುವನ್ನು ವಶಕ್ಕೆ ಪಡೆದಿಲ್ಲ ಎಂದು ಹೇಳುವುದು ಸರಿಯಲ್ಲ. ಮಹಜರ್ (ನಿಪಿ-2) ಪೊಲೀಸ್ ಠಾಣೆಯಲ್ಲಿ ಸಿದ್ಧಪಡಿಸಲಾಗಿದೆ ಎಂದು ಹೇಳುವುದು ಸರಿಯಲ್ಲ. ಆರೋಪಿಗೂ ಈ ಕೇಸಿನಲ್ಲಿ ಹಾಜರು ಪಡಿಸಿದ ವಸ್ತುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದು ಹೇಳುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.